# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 763 |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೀದರ್‌ನಿಂದ ಹುಮನಾಬಾದ್ ವರೆಗಿನ ರಾಷ್ಟ್ರೀಯ ಹೆದ್ದಾರಿಯ-50 ರ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ; ಕಾಮಗಾರಿ ಮುಕ್ತಾಯವಾಗುವುದು ಯಾವಾಗ; ಈ ಕಾಮಗಾರಿಗಾಗಿ ಎಷ್ಟು ಅನುದಾನ ಮೀಸಲಿಡಲಾಗಿದೆ; ಯಾವ ಏಜೆನ್ಸಿಗೆ ನೀಡಲಾಗಿದೆ; | ರಾಷ್ಟ್ರೀಯ ಹೆದ್ದಾರಿ-50ರ ಬೀದರ್ ನಿಂದ ಹುಮನಾಬಾದ ವರೆಗಿನ ಭಾಗವು ರಾಷ್ಟ್ರೀಯ ಹೆದ್ದಾರಿ ವಲಯದ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ. ಸದರಿ ಹೆದ್ದಾರಿಯಲ್ಲಿ ರಾಷ್ಟ್ರೀಯ ಹೆದ್ದಾರಿ ವಲಯದ ವತಿಯಿಂದ ಕೈಗೊಳ್ಳುತ್ತಿರುವ ಕಾಮಗಾರಿಯ ವಿವರ ಈ ಕೆಳಕಂಡಂತಿದೆ.<br>• ಕಾಮಗಾರಿ ಪ್ರಾರಂಭಿಸಿದ ದಿನಾಂಕ:18.03.2021<br>• ಕಾಮಗಾರಿ ಪೂರ್ಣಗೊಳಿಸಲು ನಿಗಧಿ ಪಡಿಸಿದ ದಿನಾಂಕ: 17.03.2023.<br>• ಕಾಮಗಾರಿ ಪೂರ್ಣಗೊಳಿಸಬಹುದಾದ ದಿನಾಂಕ: 17.03.2024.<br>• ಮಂಜೂರಾದ ಮೊತ್ತ ರೂ.344.79 ಕೋಟಿಗಳು.<br>• ಗುತ್ತಿಗೆದಾರರ ಹೆಸರು: ಶ್ರೀ ಸ್ವಾಮಿ ಸಮರ್ಥ ಇಂಜಿನಿಯರ್, ಪ್ರೈ.ಲಿ. ಪುಣೆ. |
| ಆ) | ಈ ಹೆದ್ದಾರಿಯ ನಿರ್ಮಾಣ ಕಾರ್ಯ ಮಂದಗತಿಯಲ್ಲಿ ಸಾಗುತ್ತಿರುವುದರಿಂದ ಹಾಗೂ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; | ಸದರಿ ಹೆದ್ದಾರಿಯ ನಿರ್ಮಾಣ ಕಾಮಗಾರಿಯು ಈ ಕೆಳಕಂಡ ಕಾರಣಗಳಿಂದಾಗಿ ಮಂದಗತಿಯಲ್ಲಿ ಪ್ರಗತಿಯಲ್ಲಿರುತ್ತದೆ;<br>• ಕಾಯ್ದಿಟ್ಟ ಅರಣ್ಯ ಪ್ರದೇಶದ ಅನುಮತಿಗಾಗಿ.<br>• ಭೂಸ್ವಾಧೀನ ಪ್ರಕ್ರಿಯೆಯಿಂದಾಗಿ.<br>• ವಿದ್ಯುತ್ ತಂತಿ 11, 33 & 110 KV ಸ್ಥಳಾಂತರ.<br>• ರಸ್ತೆಯ ಅಗಲೀಕರಣಕ್ಕಾಗಿ ಮರಗಳನ್ನು ಕಟಾವು ಮಾಡುವುದು.<br>• ಹೆಚ್ಚುವರಿ/ಬದಲಾವಣೆ ಕಾಮಗಾರಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ.<br>• ಪುತ್ಥಳಿ / ಮೂರ್ತಿಗಳ ಸ್ಥಳಾಂತರ.<br><br>ಪ್ರಸ್ತುತ ಕಾಮಗಾರಿಯ ಭೌತಿಕ ಪ್ರಗತಿಯು 66.80% ಮತ್ತು ಆರ್ಥಿಕ ಪ್ರಗತಿಯು 60.20% ಆಗಿದ್ದು, ಮೇಲಿನ ಸಮಸ್ಯೆಗಳನ್ನು ಬಗೆಹರಿಸಿ ದಿನಾಂಕ:17.03.2024 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ. |

| | | |
|---|---|---|
| ಇ) | ಈ ಕಾಮಗಾರಿಗೆ ಹಲವು ಸೇತುವೆಗಳನ್ನು ಅಳವಡಿಸುತ್ತಿದ್ದು, ಇವುಗಳು ವೈಜ್ಞಾನಿಕವಾಗಿವೆಯೇ; ಸೇತುವೆಗಳು ಅವೈಜ್ಞಾನಿಕವಾಗಿವೆ ಎಂದು ಸಾರ್ವಜನಿಕರು ಹೇಳುತ್ತಿರುವುದು ನಿಜವೇ? | ಸದರಿ ಕಾಮಗಾರಿಯಲ್ಲಿ ಅಳವಡಿಸಿರುವ ಎಲ್ಲಾ ಸೇತುವೆಗಳನ್ನು MoRTH/IRC ಮಾನದಂಡಗಳ ಅನ್ವಯ ವಿನ್ಯಾಸಗೊಳಿಸಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರವೆ ನಿರ್ಮಾಣ ಮಾಡಲಾಗುತ್ತಿದೆ ಹಾಗೂ ಕಾಮಗಾರಿಯ ಮೇಲ್ವಿಚಾರಣೆಗಾಗಿ ನೇಮಿಸಲಾದ ಅಥಾರಿಟಿ ಇಂಜಿನಿಯರ್ ರವರು ಸೇತುವೆಗಳಿಗೆ ಸಂಬಂಧಪಟ್ಟಂತೆ ಎಲ್ಲಾ ರೀತಿಯ ಪರೀಕ್ಷೆಗಳನ್ನು ನಡೆಸುತ್ತಿದ್ದು, ಅವೈಜ್ಞಾನಿಕ ಸೇತುವೆಗಳನ್ನು ನಿರ್ಮಿಸಿರುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಕಡತ ಸಂಖ್ಯೆ: ಲೋಇ 51 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು